1054 (1279) ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ರಾಜ್ಯದಲ್ಲಿರುವ 100 ಹಾಸಿಗೆಯುಳ್ಳ ಆಸ್ಪತ್ರೆ ಹಾಗೂ ಇತರೆ ಆಸ್ಪತ್ರೆಗಳಿಗೆ ಸಲಹಾ ಸಮಿತಿಯನ್ನು ರಚನೆ ಮಾಡಲಾಗಿದೆಯೇ,

ಆ) ಹೌದಾದಲ್ಲಿ ಸದಸ್ಯರ ಬಗ್ಗೆ ವಿವರ ನೀಡುವುದು, ಇಲ್ಲದಿದ್ದಲ್ಲಿ ವಿಳಂಬಕ್ಕೆ ಕಾರಣವೇನು,

ಇ) ಆಸ್ಪತ್ರೆಗಳಲ್ಲಿ ಸಂಗ್ರಹವಾದ ಬಳಕೆದಾರರ ಶುಲ್ಕ (Users Charge) ದಿಂದ ಆಸ್ಪತ್ರೆಗಳಿಗೆ ಉಪಕರಣ/ ಔಷಧಿ ಇತ್ಯಾದಿಗಳನ್ನು ಕೊಳ್ಳಲು ಸಮಿತಿ ನೇಮಕವಾಗಿದೆಯೇ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ರಾಜ್ಯದಲ್ಲಿರುವ 100 ಹಾಸಿಗೆಯುಳ್ಳ ಆಸ್ಪತ್ರೆಗೆ ಹಾಗೂ ಇತರೆ ಆಸ್ಪತ್ರೆಗಳಿಗೆ ಸಲಹಾ ಸಮಿತಿಯ ಬದಲಾಗಿ ಆರೋಗ್ಯ ರಕ್ಷಣಾ ಸಮಿತಿಯನ್ನು ರಚಿಸಲಾಗಿದೆ

ಆ) ಸರ್ಕಾರಿ ಆಸ್ಪತ್ರೆಗಳಲ್ಲಿ ದಿನಾಂಕ 22 08 03 ರಿಂದ ಸಂದರ್ಶಕ ಸಮಿತಿಗಳು ರದ್ದಾಗಿ ಆರೋಗ್ಯ ರಕ್ಷಾ ಸಮಿತಿಗಳು ರಚಿತವಾಗಿವೆ ಎರಡು ತರಹದ ಸಮಿತಿಗಳನ್ನು ರಚಿಸಲಾಗಿದ್ದು ಜಿಲ್ಲಾ ಹಾಗೂ ಇತರ ಮೇಲ್ಮಟ್ಟದ ಆಸ್ಪತ್ರೆಗಳಿಗೆ ಒಂದು ತರಹ ಸಮಿತಿ ಹಾಗೂ ತಾಲ್ಲೂಕು ಮಟ್ಟದ ಆಸ್ಪತ್ರೆ/ ಸಿ ಎಚ್ ಸಿ / ಪ್ರಾಥಮಿಕ ಆರೋಗ್ಯ ಕೇಂದ್ರಗಳ ಮಟ್ಟದಲ್ಲಿ ಒಂದು ಸಮಿತಿ ಹೀಗೆ ರಚನೆಗೊಂಡಿರುತ್ತವೆ

ಜಿಲ್ಲಾ ಮಟ್ಟದ ಆಡಳಿತ ಮಂಡಳಿಗೆ ಜಿಲ್ಲಾ ಉಸ್ತುವಾರಿ ಸಚಿವರನ್ನು ಅಧ್ಯಕ್ಷರನ್ನಾಗಿ ಒಳಗೊಂಡಂತೆ 17 ಜನರು ಸಮಿತಿಯಲ್ಲಿರುತ್ತಾರೆ 6 ಜನ ಅಧಿಕಾರೇತರ ಸದಸ್ಯರನ್ನು ನೇಮಕ ಮಾಡಲು ಅವಕಾಶವಿದೆ ಇದೇ ರೀತಿ ತಾಲ್ಲೂಕಿಗೊಂದರಂತೆ ಆರೋಗ್ಯ ರಕ್ಷಾ ಸಮಿತಿಗಳು ರಚಿತವಾಗಿದ್ದು, ಇದರಲ್ಲಿ ಅಧ್ಯಕ್ಷರು, ತಾಲ್ಲೂಕು ಪಂಚಾಯತ್ ಇವರ ಅಧ್ಯಕ್ಷತೆಯಲ್ಲಿ ಇತರೆ 7 ಜನರ ಅಧಿಕಾರಿ ಸದಸ್ಯರಿರುತ್ತಾರೆ

ದಿನಾಂಕ 18 01 2007 ರಿಂದ ತಾಲ್ಲೂಕು ರಕ್ಷಾ ಸಮಿತಿಗಳಿಗೆ, ಸಂಬಂಧಿಸಿದ ವಿಧಾನ ಸಭಾ ಸದಸ್ಯರು ಅಧ್ಯಕ್ಷರು ಹಾಗೂ 6 ಜನ ಅಧಿಕಾರೇತರ ಸದಸ್ಯರಿಗೆ ನಾಮ ನಿರ್ದೇಶನ ಮಾಡಿ ಆದೇಶ ಹೊರಡಿಸಲಾಗಿದೆ

ಇ) ಆಸ್ಪತ್ರೆಯಲ್ಲಿ ಸಂಗ್ರಹವಾದ ಬಳಕೆದಾರರ ಶುಲ್ಕ (Users Charge) ದಿಂದ ಆಸ್ಪತ್ರೆಗಳಿಗೆ ಉಪಕರಣ/ ಔಷಧಿ ಇತ್ಯಾದಿಗಳನ್ನು ಕೊಳ್ಳಲು ಆರೋಗ್ಯ ರಕ್ಷಾ ಸಮಿತಿಯನ್ನು ನೇಮಕ ಮಾಡಲಾಗಿದೆ

1055 (1184) ಶ್ರೀ ಅಶೋಕ್ ಗುರಪ್ಪ ಶಾಬಾದಿ (ಸಿಂಧಗಿ) ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯವಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ,

ಅ) ಸಿಂಧಗಿ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲು ಸರ್ಕಾರ ಕೈಗೊಂಡ ಕ್ರಮವೇನು, (ವಿವರ ಒದಗಿಸುವುದು)

ಆ) ಹಾಲಿ ಸಿಂಧಗಿ ವಿಧಾನ ಸಭಾ ಕ್ಷೇತ್ರದಲ್ಲಿರುವ ಆರೋಗ್ಯ ಕೇಂದ್ರಗಳ ಸಂಖ್ಯೆ ಎಷ್ಟು,

ಇ) ಸಿಂಧಗಿ ವಿಧಾನ ಸಭಾ ಕ್ಷೇತ್ರದಲ್ಲಿ ಹೊಸದಾಗಿ ಆರೋಗ್ಯ ಕೇಂದ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ಸಿಂಧಗಿ ವಿಧಾನ ಸಭಾ ವ್ಯಾಪ್ತಿಯಲ್ಲಿ ಬರುವ 7 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಕಲಕೇರಿ ಕೇಂದ್ರವನ್ನು ಸಮುದಾಯ ಆರೋಗ್ಯ ಕೇಂದ್ರವನ್ನಾಗಿ ಮೇಲ್ದರ್ಜೆಗೇರಿಸಲಾಗಿದೆ ಈ ಕೇಂದ್ರದ ಕಟ್ಟಡ ಕಾಮಗಾರಿಯನ್ನು 08 02 2001ರಲ್ಲಿ 55 ಲಕ್ಷ ರೂ ಗಳಿಗೆ ಆಡಳಿತಾತ್ಮಕ ಮಂಜೂರಾತಿ ನೀಡಲಾಗಿದೆ 28 05 2002 ರಂದು ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ 2006–07 ರಲ್ಲಿ 5 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗಿದೆ ಪುನಃ ಈಗ 20 ಲಕ್ಷ ರೂ ಗಳನ್ನು ಬಿಡುಗಡೆ ಮಾಡಲಾಗುತ್ತಿದೆ 07–08ನೇ ಸಾಲಿನಲ್ಲಿ ಈ ಕಟ್ಟಡವನ್ನು ಪೂರ್ಣಗೊಳಿಸಲಾಗುವುದು